# ಬರವಣಿಗೆ ದೇವರು ಕೊಟ್ಟ ವರ

ಆಶು ಶರ್ಮಾ | ಡೋಗ್ರಿ

1 ಶಿಕ್ಷಣ ಪಡೆದು ಉದ್ಯೋಗವನ್ನು ಹುಡುಕುವುದು ಸಾಮಾನ್ಯವಾಗಿ ಎಲ್ಲರ ಜೀವನದ ಧ್ಯೇಯವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಕೆಲವರಿಗಷ್ಟೇ ದೇವರು ಪ್ರತಿಭೆಯನ್ನು ಕರುಣಿಸಿರುತ್ತಾನೆ. ಆಡುವುದು, ಹಾಡುವುದು, ಓಡುವುದು... ಹೀಗೆ. ಅದೇ ರೀತಿ ಬರೆಯುವುದು ಕೂಡ ಒಂದು ಪ್ರತಿಭೆಯಾಗಿದೆ. 'ಬರವಣಿಗೆ' ಎಂಬ ಪ್ರತಿಭೆಯು ಒಬ್ಬ ವ್ಯಕ್ತಿಗೆ ಒಲಿದರೆ ಸಾಲದು, ಅದಕ್ಕಾಗಿ ಪೂರಕ ವಾತಾವರಣವೂ ನಿರ್ಮಾಣವಾಗಬೇಕು. ಆಗಷ್ಟೇ ಒಳ್ಳೆಯ ಸಾಹಿತ್ಯ ಸೃಷ್ಟಿಯಾಗಲು ಸಾಧ್ಯ. ನನ್ನ ಪ್ರಕಾರ, ಬರವಣಿಗೆ ಎಲ್ಲರಿಗೂ ಸಾಧ್ಯವಿಲ್ಲ. ನನಗೆ ಅದು ದೇವರು ಕೊಟ್ಟ ವರವೆಂದೇ ಭಾವಿಸುತ್ತೇನೆ ಮತ್ತು ನನ್ನ ಗೆಳತಿಯರಿಗೆ ಅದನ್ನೇ ಹೇಳುತ್ತಿರುತ್ತೇನೆ. ಸಮಾಜದಲ್ಲಿ ನಾವು ನೋಡುವ ಎಷ್ಟೋ ವಿಚಾರಗಳಿಗೆ ಪ್ರತಿಕ್ರಿಯಿಸಲು ಈ ಬರವಣಿಗೆಯು ಒಂದು ಸಲಕರಣೆ. ಓರ್ವ ವ್ಯಕ್ತಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರೆ ಅವರು ತಮ್ಮ ಹೃದಯವನ್ನು ಸ್ವಚ್ಛವಾಗಿ ಇರಿಸಿಕೊಳ್ಳಬೇಕು. ಬರವಣಿಗೆಯು ಅಂತರಂಗದೊಡನೆ ನಡೆಸುವ ಸಂವಾದದಂತೆ. ಸತ್ಯವನ್ನೂ, ಸಕಾರಾತ್ಮಕವಾದ ವಿಚಾರಗಳನ್ನೂ ಬರೆಯುವುದರಿಂದ, ಸಮಾಜದ ವಿಮರ್ಶೆಗೆ ಅನುಕೂಲವಾಗುತ್ತದೆ. ಉಳಿದವರಿಗಿಂತ ಲೇಖಕರು ಸಮಾಜವನ್ನು ನೋಡುವ ದೃಷ್ಟಿಕೋನ ಬೇರೆಯಾಗಿರುತ್ತದೆ. ಅದು ಹೆಚ್ಚು ಸಮಗ್ರವಾಗಿರುತ್ತದೆ ಎಂದುಕೊಂಡಿದ್ದೇನೆ.

2 ನಾನು ಮಹಿಳೆಯಾಗಿರುವುದಕ್ಕೂ ಬರವಣಿಗೆಗೂ ಸಂಬಂಧವಿದ್ದೇ ಇದೆ. ನಮ್ಮ ಜೀವನ ಅನುಭವಗಳನ್ನು ನಾವು ಬರೆಯುತ್ತೇವೆ. ನನ್ನ ಲೋಕದ, ಅಂದರೆ ಮಹಿಳಾ ಲೋಕದ ಕಥೆ–ಕವಿತೆಗಳನ್ನು ನಾನು ಬರೆಯುವವಳಾದ್ದರಿಂದ ನಾನು ಹೆಣ್ಣಾಗಿರುವುದಕ್ಕೂ ನನ್ನ ಬರವಣಿಗೆಗೂ ಪರಸ್ಪರ ಸಂಬಂಧವಿದೆ. ಇದು ಇತರರಿಗೂ ಅನ್ವಯಿಸುತ್ತದೆ.

3 ಹಿಂದಿನ ತಲೆಮಾರು ಮತ್ತು ಇಂದಿನ ತಲೆಮಾರಿನ ನಡುವೆ ಹೆಚ್ಚು ವ್ಯತ್ಯಾಸವೇನೂ ಇಲ್ಲವೆಂದು ಭಾವಿಸುತ್ತೇನೆ. ಅಂದಿನ ಸಮಸ್ಯೆಗಳು ಬೇರೆ ತೆರನಾದವು. ಇಂದಿನ ಸಮಸ್ಯೆಗಳು ಬೇರೆಯೇ ತೆರನಾದವು. ಮಹಿಳೆಯರಿಗೆ ಆಗಿನ ಕಾಲದಲ್ಲಿ ಶಿಕ್ಷಣವೇ ಸಿಗುತ್ತಿರಲಿಲ್ಲ. ಮನೆಯಿಂದ ಹೊರಗೆ ಹೋಗುವುದು ಸವಾಲಿನ ವಿಷಯವಾಗಿತ್ತು. ಇಂದು ನಗರೀಕರಣವಾಗಿದೆ. ಎಲ್ಲರಿಗೂ ಶಿಕ್ಷಣ ದೊರೆಯುತ್ತಿದೆ. ಕುಟುಂಬದೊಳಗೆ ಸಂಬಂಧಗಳ ಸ್ವರೂಪ ಬದಲಾಗಿದೆ. ಆಧುನೀಕರಣ ನಮ್ಮ ಮನೆಯೊಳಗೆ ಮತ್ತು ಮನದೊಳಗೆ ಪ್ರವೇಶ ಮಾಡಿದೆ. ಆ ಮಟ್ಟಿಗೆ ಹೊಸ ತಲೆಮಾರು ಸ್ವಲ್ಪ